ನವಿರವಿ, ಬಾಳೆಹೊನ್ನೂರು
*ಕನ್ನಡ ಭಾಷೆಯ 52 ಅಕ್ಷರಗಳನ್ನು ಕಲಿಯುವುದಕ್ಕಿಂತ ಆಂಗ್ಲ ಭಾಷೆಯ 26 ಅಕ್ಷರಗಳನ್ನು ಕಲಿಯುವುದು ಸುಲಭ ಅಲ್ಲವೆ?*



ಹ್ಞ! ಭಾಷೆ ಕಲಿಯಲು ಎಷ್ಟು ಅಕ್ಷರವಿದೆ ಎಂಬುದು ಮುಖ್ಯವಲ್ಲ, ಎಷ್ಟು ಅಕ್ಕರೆ ಇದೆ ಎಂಬುದು.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಜೀನ್ಸ್ ಪ್ಯಾಂಟ್ ಬಂದಾಗಿನಿಂದ ಹುಡುಗಿಯರ ಸುಂದರವಾದ ಲಂಗ ದಾವಣಿ ಎಲ್ಲಿ ಹೋಯಿತು?*
ಹುಡುಗರ ದಟ್ಟಿ ಪಂಚೆ, ಉತ್ತರೀಯ, ಜುಟ್ಟುಗಳನ್ನು ಹುಡುಕಿಕೊಂಡು ಹೋಯಿತಂತೆ.

ಆರಿಫ್, ದಾವಣಗೆರೆ
*ಮರೆವು ಮನುಷ್ಯನ ಸಹಜ ಗುಣ. ಏಕೆ?*
ಖಂಡಿತ ಅಲ್ಲ; ಲಕ್ಷ್ಯವಿಟ್ಟರೆ ಲಕ್ಷ ನೆನಪು!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸ್ವರ್ಗ, ನರಕ ಎಂದರೇನು?*
ಸ್ವರ್ಗ ಚಳಿಗಾಲದ ಸಂಜೆಯ ಬಿಸಿಬಿಸಿ ಬೋಂಡ; ನರಕ ನಂತರದ ಅಸಿಡಿಟಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಮಾನವನ ಸಾವಿನ ನಂತರ ಏನಿರುತ್ತೆ?*



ಹೊಟ್ಟೆಬಿರಿಯುವಷ್ಟು ತಿಥಿ ಊಟ!

ಪಿ.ಜೆ.ರಾಘವೇಂದ್ರ, ಮೈಸೂರು
*ಮಂಡೋದರಿಗೂ ಹತ್ತು ತಲೆ ಇದ್ದಿದ್ದರೆ ಹೇಗಿರುತ್ತಿತ್ತು ಸಾರ್?*
ಒಂಬತ್ತು ಜಡೆಗಳು ಬೆನ್ನಿನ ಆಧಾರವೇ ಇಲ್ಲದೆ ನೇತಾಡುವಂತಾಗುತ್ತಿತ್ತು.

ಎಚ್.ಜಿ. ಜಗದೀಶ್, ಮೈಸೂರು
*ಕುಡುಕರು ಸಮಾಜಕ್ಕೆ ಡಾಕ್ಟರು ಅಂತ ಭಟ್ಟರು ಹಾಡು ಬರೆದಿದ್ದಾರಲ್ಲಾ, ಸರೀನಾ ರಾಂಜೀ?*
ಆ ವಿಷಯ ಅಂತಿರಲಿ; ಇಂತಹ ಹಾಡುಗಳು ಸಮಾಜಕ್ಕೆ ತಗುಲಿದ ರೋಗ, ಬರೆದವ ರೋಗ ಹರಡುವ ವೈರಸ್ ಎಂಬುದೇ ದಿಟ.

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಕೇಳಿದಿರಿ?ಯಲ್ಲಿ ಲಾಗಾಯ್ತಿನಿಂದಲೂ ಬರೀ ಗಂಡಸರೇ ಉತ್ತರಿಸುತ್ತಿದ್ದಾರಲ್ಲಾ, ಇಲ್ಲಿ ಮಹಿಳೆಗೆ ಮೀಸಲಾತಿ ಬೇಡವೆ?*
ಸರಿ ಬಿಡಿ. ಬಿಡಿಸಿ ಹೇಳಿಬಿಡುತ್ತೇನೆ. ರಾಮ್ ಎಂದರೆ ರಮ್ಯಾ, ಅನಸೂಯಾ, ಮಾನಸಾ ಮೂವರೂ ಸೇರಿ ಉತ್ತರಿಸುತ್ತಿರುವ ಅಂಕಣ.

ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ
*3 ಸೋಪ್ ಕೊಂಡರೆ 1 ಪೆನ್ ಉಚಿತ ಎನ್ನುವುದರ ಬದಲು 1 ಪೆನ್ ಕೊಂಡರೆ 3 ಸೋಪ್ ಉಚಿತ ಎನ್ನುವುದು ಅನುಕೂಲವಲ್ಲವೆ?*
ಏಕೆ? ಆ ಪೆನ್ ಜೇಬಿನಲ್ಲಿಟ್ಟುಕೊಂಡಾಗ 3 ಸೋಪ್ ಬಳಸಿ ಒಗೆಯುವಷ್ಟರ ಮಟ್ಟಕ್ಕೆ ಲೀಕ್ ಆಗುವುದೇನು?

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಮಹೋನ್ನತ ವ್ಯಕ್ತಿ ಬುದ್ಧ. ಅಪ್ಪನಾಗದ ಈ ಅಪ್ಪನಿಂದ ರಾಜಕುಮಾರ ರಾಹುಲನಿಗೆ ಸಿಕ್ಕಿದ್ದೇನು?*
ಹೆರಿಗೆನೋವಿಲ್ಲದೆ ಹೆರಿಗೆ ಆಗದು; ಒಂದರ ಔನ್ನತ್ಯಕ್ಕೆ ಮತ್ತೊಂದು ನೋವು ಪಡುವುದು ಜಗದ ನಿಯಮ.

ಎಸ್.ಎಸ್. ಸುಬ್ರಹ್ಮಣ್ಯ, ಹಾಸನ
*ಹಣ, ಹೆಣ, ಹೆಣ್ಣ, ಹೆಣ್ತಿ, ಗಣ್ಣ - ಏನು ವಿಶೇಷ?*
ಬಾಯ್ಬಿಡೋದೇ ವಿಶೇಷ – ಒಂದನೆಯದಕ್ಕೆ ಎರಡನೆಯದು; ಮೂರು–ನಾಲ್ಕನೆಯದಕ್ಕೆ ಐದನೆಯದು – ವಿಶೇಷವಾಗಿ ಪರರದ್ದಾಗಿದ್ದಾಗ!

ಡ್ರೈ ವಿಶ್ವನಾಥ್, ಬೆಂಗಳೂರು
*ಗೋಲ್‌ಮಾಲ್ ಎಂದರೆ ಏನು?*
ಫುಟ್ಬಾಲ್‌ನಲ್ಲಿ ಗೋಲ್ ತಡೆಯದಿರಲು ಗೋಲ್‌ಕೀಪರ್ ಪಡೆಯುವ ಬೆಟ್ಟಿಂಗ್ ಹಣ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ರಾಮ ಎಂದರೆ ಸಾತ್ವಿಕ ಮನುಷ್ಯ. ಕೃಷ್ಣ ಎಂದರೆ ಕೀಟಲೆಗಾರ. ನಮ್ಮ ಸುಧಾ ರಾಮನಿಗೆ ಕೀಟಲೆ ಮಾಡುವ ಬುದ್ಧಿ ಏಕೆ ಬಂತು?*
ಕೊಲಾಬರೇಷನ್ ಯುಗವಲ್ಲವೇ; ರಾಮನಾಮ ಸಾತ್ವಿಕತೆಗೆ ಕೃಷ್ಣನಾಮ ಕೀಟಲೆ!

## ಬಹುಮಾನಿತ ಪ್ರಶ್ನೆ

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ಈ ಜಗತ್ತಿನಲ್ಲಿ ಎಲ್ಲರ ಮುಖ ಒಂದೇ ತರಹ ಇದ್ದಿದ್ದರೆ ಏನಾಗುತ್ತಿತ್ತು ಸಾರ್?*
ವೆಹಿಕಲ್‌ಗಳಂತೆ ನಂಬರ್ ಪ್ಲೇಟ್ ಸಿಕ್ಕಿಸಿಕೊಂಡು ತಿರುಗಾಡಬೇಕಾಗುತ್ತಿತ್ತು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಕೂಡಿಬಾಳಿದರೆ ಸ್ವರ್ಗಸುಖವಂತೆ. ಕೂಡದೆಯೇ ಬಾಳುವವರಿಗೆ?*
ಎಂದೂ ಕೂಡದೆಯೇ ನಿಂತಿರಲೇಬೇಕಾದ ಹೋಟೆಲ್ ಮಾಣಿಯ ಕೆಲಸ!

ಜಾಕೋಬ್ ಡಿಸೋಜ, ಕುರುವಳ್ಳಿ
*ದುಡ್ಡೇ ದೊಡ್ಡಪ್ಪ; ದುಡ್ಡಿದ್ದವನು?*
ದೊಡ್ಡಪ್ಪನ ಮಗ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಕುಡಿದವರೇಕೆ ವಾಲಾಡ್ತಾರೆ ಸಾರ್?*



ಕುಡಿಯಕ್ಕೆ ಮುಂಚೆ ಬಾಟಲ್ ಅಲ್ಲಾಡಿಸೋದನ್ನ ಮರೆತಿರ್ತಾರಂತೆ, ಅದಕ್ಕೇ....!

ಆರ್. ಮಧುಸೂದನ್, ಹಾಸನ
*ಕನ್ನಡಪರ ಸಂಘಟನೆಯಲ್ಲಿರುವ ನನ್ನ ಮಿತ್ರ ತನ್ನ ಹೆಸರನ್ನು 'ಮಹೇಶ' ಎಂದು ಹೇಳುವ ಬದಲು 'ಮಏಶ' ಅಂತಾನಲ್ಲಾ...?*
ಅಂತಹ ಸಂಘಟನೆಗಳಲ್ಲಿ ಸೇರುವ ಕೆಲವರು ಹೆಸರು ಕೆಡಿಸಿಕೊಳ್ಳುವುದು ಮಾಮೂಲು ಬಿಡಿ.

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ಕಾಪಿ ರಾಗದಲ್ಲಿ ಯಾವ ಬ್ರ್ಯಾಂಡಿನ ಕಾಪಿ ಇದೆ? ಉತ್ತರಿಸದಿದ್ದರೆ ತಲೆ ಉಪ್ಪಿಯ ಓಳಾಗುವುದು, ಎಚ್ಚರ!*
'ಕಾವ್ಯ ಪಿಪಾಸು' ಬ್ರ್ಯಾಂಡ್!

ಕೆ. ನಾಗರಾಜ್, ಬೆಂಗಳೂರು
ವಿಶ್ವೇಶ್ವರಯ್ಯನವರ ತಲೆಯನ್ನು ವಿದೇಶಿಯರು ಕೇಳಿದ್ದರಂತೆ. ತಮ್ಮ ತಲೆ ಯಾರೂ ಕೇಳುತ್ತಿಲ್ಲವೆ?
ಕೇಳುತ್ತಿದ್ದಾರಲ್ಲಾ... ಮನೆಯ ಬಳಿಯ ಕ್ಷೌರಿಕರು!

■ ರಾಮ್